# DAVANGERE SUGAR COMPANY LIMITED

CIN: L10721KA1970PLC001949

February 12, 2026

| | |
|---|---|
| **BSE Limited** | **National Stock Exchange of India** |
| Corporate Relationship Department | Corporate Service |
| 1st Floor, New Trading Ring, | Exchange Plaza, |
| Rotunda bldg., P.J. Towers, | Bandra Kurla Complex, |
| Dalal Street, Mumbai- 400001 | Bandra (East), Mumbai -400051 |
| Scrip Code: 543267 | NSE Symbol: DAVANGERE |
| | |
| Kind Attn : The Manager, | Kind Attn: The Manager, |
| Department of Corporate Services | Listing Department |

Dear Sir/ Madam,

**Sub: Newspaper Publications of the Extract of Un-Audited Financial Results for the Quarter and Nine months ended on 31st December 2025, as per Regulation 47 of the SEBI (Listing Obligation & Disclosure Requirement) Regulations, 2015.**

Pursuant to Regulation 47 of SEBI (Listing Obligation and Disclosure Requirement) Regulation, 2015, we are submitting herewith newspaper publications of the Un-Audited Financial Results for the Quarter and Nine months ended on 31st December 2025, published in the following Newspapers:

1. The New Indian Express (English) dated 12th February, 2026;
2. Nagaravani (Kannada) dated 12th February, 2026;

Kindly acknowledge and take the same on record.

Thanking You,
**For Davangere Sugar Company Limited**

UMA SINGH
Digitally signed by UMA SINGH
Date: 2026.02.12 15:10:18 +05'30'

**Uma Singh**
**Company Secretary and Compliance Officer**
**Membership No.**

**Encl. as above**

**Factory & Admin Office:** Kukkuwada – 577 525. Davangere Taluk & District. Karnataka State. INDIA
Phone PBX : 08192 201623,24,25,26,28,29 Accounts Direct : 08192-201789 Fax No: 08192 201627
email : davangeresugars@gmail.com, accounts@ davangeresugars@gmail.com, material.dscl@gmail.com
Website : www.davangeresugars.com
**Regd. Office** : 73/1,P.B.No. 312, Shamanuru Road, Davangere – 577 004. Karnataka State. INDIA
**Corporate Office** : No. 19, Shivashankar Plaza, 3rd Floor, Richmond Circle, Lalbagh Road, Bangalore – 560 027, Karnataka State. INDIA
Phone : 080-22272183 Fax : 080-22222779

ನಗರವಾಣಿ
ದಾವಣಗೆರೆ
ಫೆಬ್ರವರಿ 12, 2026
ಗುರುವಾರ,
ಪುಟ-3

ಪತ್ರಿಕೆಗಳಿಗೆ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
08192-254186

## ಕೌಶಲ್ಯಾಭಿವೃದ್ಧಿ ನಿಗಮದ ಅಧ್ಯಕ್ಷರ ಜಿಲ್ಲಾ ಪ್ರವಾಸ

ದಾವಣಗೆರೆ, ಫೆ.11 : ಕರ್ನಾಟಕ ಕೌಶಲ್ಯಾ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಶಿವಕಾಂತಮ್ಮ ನಾಯಕ್ ಇವರು ಫೆ.14 ಮತ್ತು 15 ರಂದು ದಾವಣಗೆರೆ ಜಿಲ್ಲಾ ಪ್ರವಾಸ ಕೈಗೊಳ್ಳಲಿದ್ದಾರೆ.

ಫೆ.14 ರಂದು ಬೆಳಿಗ್ಗೆ 10.30ಕ್ಕೆ ಹೊನ್ನಾಳಿ ತಾಲ್ಲೂಕಿನ ಸೂರಗೊಂಡನಕೊಪ್ಪ ಗ್ರಾಮದಲ್ಲಿ ಆಯೋಜಿಸಲಾಗಿರುವ 287ನೇ ಸಂತ ಸೇವಾಲಾಲ್‌ರವರ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಫೆ.15 ರಂದು ಮಧ್ಯಾಹ್ನ 1.30ಕ್ಕೆ ನಗರದ ಜಿಲ್ಲಾ ಕೌಶಲ್ಯಾ ಅಭಿವೃದ್ಧಿ ಕಚೇರಿಗೆ ಮತ್ತು ಕೌಶಲ್ಯಾ ತರಬೇತಿ ಕೇಂದ್ರಗಳಿಗೆ ಭೇಟಿ ನೀಡಿ, ನಂತರ ಬೆಂಗಳೂರಿಗೆ ಪ್ರಯಾಣ ಬೆಳೆಸುವರೆಂದು ಪ್ರಕಟಣೆ ತಿಳಿಸಿದೆ.

**ಕಥೆ-ಕವನ, ಚುಟುಕು, ಮಕ್ಕಳು ಬಿಡಿಸಿದ ಚಿತ್ರಗಳನ್ನು ಪ್ರಕಟಿಸುವ ವಿಭಾಗ**
**9740137083**

### ದಿನಕ್ಕೊಂದು ಚುಟುಕು

ಬದುಕು.......

ಬರುತ್ತವೆ ಜೀವನದಲ್ಲಿ ದುಃಖ ದುಮ್ಮಾನಗಳ ಸರಕು
ಆಗ ನಡೆಸಲು ತುಂಬಾ ಭಾರ ಬದುಕು
ಜಾಣ್ಮೆಯಿಂದ ಬಿಡಿಸಿಕೊಳ್ಳಬೇಕು
ಜೀವನದ ದುಃಖದ ಸರಕಿನ ತೊಡಕು
ಆಗ ನಡೆಸಬಹುದು ಹಗುರವಾದ ಬದುಕು

– ಮಹಿ ಮಹೇಶ್ವರಿ ದಾವಣಗೆರೆ

### ದಿನಕ್ಕೊಂದು ನುಡಿ ಮುತ್ತು

ನಿಸರ್ಗವೇ ಮನವ
ಕಾಡುವ ನೋವಿಗೆ ಔಷಧಿ,
ಅದರ ಸೊಬಗೇ ಮನಕೆ
ಚೇತೋಹಾರಿ ನೀಡುವ ದಿವ್ಯೌಷಧಿ.
ಪ್ರಕೃತಿ ದೇವರಿತ್ತ ವರ,
ಆಸ್ವಾದಿಸೋಣ,
ಮನೆಯ ಹೊರಬಂದು,
ಮನಬಿಚ್ಚಿ ಹಗುರಾಗೋಣ,
ನಿಸರ್ಗದ ಚೆಲುವಲಿ ಮಿಂದು!

– ಮಂಜುಳಾ ಪ್ರಸಾದ್ ದಾವಣಗೆರೆ

# ಮಠ-ಸ್ವಾಮಿಗಳು-ಭಕ್ತರು

(1ನೇ ಪುಟದಿಂದ)

ಕೆಲವರು ಬಸವಣ್ಣನವರ ಹೆಸರಿನಲ್ಲಿ ಮಠ ಕಟ್ಟಿ ತಮ್ಮ ಸ್ವಾರ್ಥ ಸಾಧಿಸಿಕೊಳ್ಳುವರು. ವಾಸ್ತವವಾಗಿ ಅಲ್ಲಿ ಶರಣರ ವಚನಗಳ ಆಶಯದಂತೆ ಬಾಳಿ ಅದನ್ನೇ ಭಕ್ತರಿಗೆ ಬೋಧಿಸಬೇಕಿತ್ತು. ಬಸವಣ್ಣನವರು ಮೌಢ್ಯ, ಕಂದಾಚಾರಗಳ ವಿರೋಧಿಗಳಾಗಿದ್ದರು. ಆದರೆ ಅವರ ಹೆಸರಿನ ಮಠದಲ್ಲೇ ಹೋಮಾದಿ ಕ್ರಿಯೆಗಳನ್ನು ನಡೆಸಿದರೆ ಅಥವಾ ಅಂಥವುಗಳಿಗೆ ಪ್ರೋತ್ಸಾಹಿಸಿದರೆ ಸ್ವಾಮಿತ್ವಕ್ಕೆ ಮಾತ್ರವಲ್ಲ; ಬಸವಣ್ಣನವರಿಗೂ ಅಪಚಾರ ಮಾಡಿದಂತೆ. ಸ್ವಾಮಿಗಳು ಜ್ಯೋತಿಷ್ಯ, ಪಂಚಾಂಗ, ರಾಹುಕಾಲ ಇತ್ಯಾದಿ ನೋಡುವ ಅಥವಾ ಅವುಗಳನ್ನು ಬಯಸುವ ಭಕ್ತರಿಗೆ ಪ್ರೋತ್ಸಾಹಿಸುವ ಕಾರ್ಯವನ್ನೂ ಮಾಡಬಾರದು. ಬಸವ ಪರಂಪರೆಯ ಕೆಲವು ಮಠ ಮತ್ತು ಊರುಗಳಲ್ಲಿ ತಿಂಗಳುಗಟ್ಟಲೆ ಪುರಾಣ ಪ್ರವಚನ ನಡೆಯುವುದುಂಟು. ಪ್ರಭುದೇವರು 'ಪುರಾಣವೆಂಬುದು ಪುಂಡರ ಗೋಷ್ಠಿ' ಎಂದು ಹೀಗಳೆದಿದ್ದಾರೆ. ಅಕ್ಕಮಹಾದೇವಿಯವರು 'ವೇದ ಶಾಸ್ತ್ರ ಆಗಮ ಪುರಾಣಗಳೆಲ್ಲವು ಕೊಟ್ಟಣವ ಕುಟ್ಟಿದ ನುಚ್ಚು ತೌಡು ಕಾಣಿಭೋ' ಎಂದು ಎಚ್ಚರಿಸಿದ್ದಾರೆ. ಬಸವಣ್ಣನವರು 'ಆದಿಪುರಾಣ ಅಸುರರಿಗೆ ಮಾರಿ, ವೇದಪುರಾಣ ಹೋತಿಂಗೆ ಮಾರಿ, ರಾಮಪುರಾಣ ರಕ್ಕಸರಿಗೆ ಮಾರಿ, ಭಾರತಪುರಾಣ ಗೋತ್ರಕ್ಕೆ ಮಾರಿ' ಎಂದು ತಮ್ಮ ಅನೇಕ ವಚನಗಳಲ್ಲಿ ಪುರಾಣಗಳ ಹೂರಣವನ್ನು ಬಿಚ್ಚಿಟ್ಟಿದ್ದಾರೆ. ಹಾಗಾಗಿ ಮಠಗಳಲ್ಲಿ ಪುರಾಣಗಳ ಬದಲು ಶರಣರ ಸಂದೇಶ ಸಾರುವ ಚಿಂತನ-ಮಂಥನ ನಡೆಯಬೇಕು. ಮಠ ಅನುಭವ ಮಂಟಪದ ಕಾರ್ಯ ಮುಂದುವರಿಸಬೇಕು.

ಭಕ್ತರು ದಾರಿ ತಪ್ಪಿದಾಗ ತಿದ್ದುವ, ಎಚ್ಚರಿಸುವ ಕಾರ್ಯ ಸ್ವಾಮಿಗಳಿಂದ ನಡೆಯಬೇಕು. ಅದರಲ್ಲೂ ಲಿಂಗಾಯತ ಮಠಗಳ ಸ್ವಾಮಿಗಳ ಜವಾಬ್ದಾರಿ ಗುರುತರವಾದುದು. ಪರಂಪರೆಯಿಂದಲೂ ಜನರು ಏನೆಲ್ಲ ಕಂದಾಚಾರಗಳ ಕೂಪದಲ್ಲಿ ಮುಳುಗಿದ್ದು ಅವೇ ಧರ್ಮಾಚರಣೆ ಎಂದು ಇಂದಿಗೂ ಆಚರಿಸುತ್ತ ಬರುತ್ತಿದ್ದಾರೆ. ಅವುಗಳನ್ನು ಬದಲಾಯಿಸಿಕೊಳ್ಳಲು ಹೇಳಿದರೆ ಇವರೆಂಥ ಸ್ವಾಮಿಗಳು ಎಂದು ಹಿಂದೆ ಮುಂದೆ ಆಡಿಕೊಳ್ಳುವ ಭಕ್ತರ ಸಂಖ್ಯೆ ಹೆಚ್ಚಬಹುದು. ಹಾಗಂತ 'ಹತ್ತರ ಕೂಡ ಹನ್ನೊಂದು ಪರ್ಷಿ ಕೂಡ ಗೋವಿಂದ' ಎನ್ನುವಂತೆ ವರ್ತನೆ ಇರಬಾರದು. ನಾವು ನಮ್ಮ ವಿದ್ಯಾರ್ಥಿ ಜೀವನದಿಂದಲೂ ಗಣಪತಿ ನಮ್ಮ ಪರಂಪರೆ ಅಲ್ಲ; ಲಿಂಗವಂತರು ಇಷ್ಟಲಿಂಗವನ್ನು ಹೊರತುಪಡಿಸಿ ಮತ್ತಾವುದಕ್ಕೂ ಮಾರು ಹೋಗಬಾರದು ಎಂದು ಹೇಳುತ್ತಲೇ ಬಂದಿದ್ದೇವೆ. ಆದರೆ ಇತ್ತೀಚಿನ ವರ್ಷಗಳಲ್ಲಿ ರಾಜಕೀಯದಲ್ಲಿ ಧರ್ಮ ಅಥವಾ ಧರ್ಮದಲ್ಲಿ ರಾಜಕೀಯ ಬೆರೆತು ಸತ್ಯ ಹೇಳಿದವರನ್ನೇ ನಿಂದಿಸುವ ಪ್ರಾಜ್ಞರು ಹೆಚ್ಚಾಗಿದ್ದಾರೆ. ಅದರಲ್ಲೂ 'ವಾಟ್ಸ್ಯಾಪ್' ಭಕ್ತರ ಹಾವಳಿ ಹೇಳತೀರದು. ಅವರು ವಿಶ್ವವಿದ್ಯಾಲಯದ ಮೆಟ್ಟಿಲು ತುಳಿಯದಿದ್ದರೂ ವಾಟ್ಸ್ಯಾಪ್ ವಿಶ್ವವಿದ್ಯಾಲಯದ ಪದವೀಧರರು. ಅವರ ಬರವಣಿಗೆ ತುಂಬಾ ಚುರುಕಾಗಿರುತ್ತದೆ. ತಾವೇ ನೀತಿಬೋಧಕರಾಗುತ್ತಾರೆ. ಎರಡು ವರ್ಷಗಳ ಹಿಂದೆ ನಮ್ಮ ನಾಟಕೋತ್ಸವದ ಶಿವ ಧ್ವಜಾರೋಹಣದಲ್ಲಿ ಗಣಪತಿ ನಮ್ಮ ಸಂಸ್ಕೃತಿ ಅಲ್ಲ ಎಂದದ್ದನ್ನೇ ಪ್ರಧಾನ ಮಾಡಿಕೊಂಡು ನಮ್ಮ ಬಗ್ಗೆ ಟೀಕೆ ಟಿಪ್ಪಣಿಗಳು ವಾಟ್ಸ್ಯಾಪ್, ಯುಟ್ಯೂಬ್, ಫೇಸ್‌ಬುಕ್, ಪತ್ರಿಕೆ ಇಂಥ ಮಾಧ್ಯಮಗಳಲ್ಲಿ ಬಂದವು. ಈಗಲೂ ಬರುತ್ತಲೇ ಇವೆ. ಹಾಗಂತ ನಮ್ಮ ತತ್ವಾದರ್ಶಗಳಿಂದ ವಿಮುಖರಾಗಬಾರದು ಎನ್ನುವ ಎಚ್ಚರ ನಮಗಿದೆ. ಈ ಎಚ್ಚರ ಎಲ್ಲ ಲಿಂಗಾಯತ ಮಠಾಧೀಶರು ಮತ್ತು ಭಕ್ತರಲ್ಲಿ ಇರಬೇಕಾದ ಅಗತ್ಯವಿದೆ.

ಕಲ್ಲ ನಾಗರ ಕಂಡಡೆ ಹಾಲನೆರೆಯೆಂಬರು,
ದಿಟದ ನಾಗರ ಕಂಡಡೆ ಕೊಲ್ಲೆಂಬರಯ್ಯಾ.
ಉಂಬ ಜಂಗಮ ಬಂದಡೆ ನಡೆಯೆಂಬರು,
ಉಣ್ಣದ ಲಿಂಗಕ್ಕೆ ಬೋನವ ಹಿಡಿಯೆಂಬರಯ್ಯಾ.
ನಮ್ಮ ಕೂಡಲಸಂಗನ ಶರಣರ ಕಂಡು ಉದಾಸೀನವ ಮಾಡಿದಡೆ,
ಕಲ್ಲ ತಾಗಿದ ಮಿಟ್ಟೆಯಂತಪ್ಪರಯ್ಯಾ.

ಬಸವತತ್ವ ಹೇಳುವ, ಬಸವಣ್ಣನವರನ್ನು ಧರ್ಮಗುರು ಎಂದು ಒಪ್ಪುವ ಬಹುತೇಕ ಲಿಂಗಾಯತ ತಾಯಂದಿರೇ ನಾಗರ ಪಂಚಮಿ ಬಂತೆಂದರೆ ಹುತ್ತ ಹುಡುಕಿಕೊಂಡು ಹೋಗುವರು. ಕೆಲವರು ಕಲ್ಲು ನಾಗಪ್ಪನಿಗೆ ಹಾಲನ್ನೆರೆಯುವರು. ಅಂಥ ಸಂದರ್ಭದಲ್ಲಿ ಇವರ ಭಕ್ತಿಗೆ ಮೆಚ್ಚಿ ನಿಜವಾದ ನಾಗರ ಹಾವು ಹುತ್ತದಿಂದ ಹೊರಬಂದು ಹೆಡೆ ಎತ್ತಿದರೆ ಅದನ್ನೂ ಪೂಜೆ ಮಾಡಬೇಕಲ್ಲವೇ? ಆದರೆ ಆಗ ಮಾಡುವುದೇನು? ಅಯ್ಯೋ ಹಾವು ಹಾವು ಎಂದು ಹಿಂದೆ ಸರಿಯುವರು. ಕೋಲು, ಕಲ್ಲಿನಿಂದ ಅದನ್ನು ಹೊಡೆದು ಸಾಯಿಸುವರು. ಇದೆಂಥ ಭಕ್ತಿ? ಯಾರಾದರೂ ಹಸಿವಿನಿಂದ ಬಳಲಿ ಅಮ್ಮಾ ಒಂದು ತುತ್ತು ಅನ್ನ ಕೊಡಿ ಎಂದರೆ ಕೊಡುವರೇನು? ಮುಂದಕ್ಕೆ ಹೋಗಪ್ಪ; ಇನ್ನೂ ಅಡಿಗೆ ಆಗಿಲ್ಲ, ದೇವರಿಗೆ ಎಡೆ ಹಿಡಿದಿಲ್ಲ ಎಂದು ಅವನನ್ನು ದಬಾಯಿಸುವರು. ಆದರೆ ಉಣ್ಣದ ದೇವರಿಗೆ ಎಡೆ ಹಿಡಿಯುವರು. ಇಂಥ ಕಾರ್ಯಗಳು ಮೌಢ್ಯದ ಪರಿಧಿಗೆ ಬರುತ್ತವೆ. ಇದನ್ನು ಜನರು ಅರ್ಥಮಾಡಿಕೊಳ್ಳಬೇಕಿದೆ. ಜನರ ನಡವಳಿಕೆಗಳನ್ನು ಕಂಡೇ ಬಸವಣ್ಣನವರು ಮೇಲಿನ ವಚನದಲ್ಲಿ ಹೇಳಿರುವುದು. ಅವರು ತಮ್ಮ ಮತ್ತೊಂದು ವಚನದಲ್ಲಿ 'ಲಿಂಗವ ಪೂಜಿಸಿ ಜಂಗಮವನುದಾಸೀನ ಮಾಡಬಾರದು' ಎಂದಿದ್ದಾರೆ. ಲಿಂಗದ ಸಾಕಾರ ರೂಪವೇ ಜಂಗಮ ಎನ್ನುವುದು ಬಸವಣ್ಣನವರ ಸಂದೇಶ. ಜಂಗಮಕ್ಕೆ ಅಂದರೆ ಜನರಿಗೆ ಉಣ್ಣಿಸಿದರೆ ಲಿಂಗಕ್ಕೆ ನೈವೇದ್ಯ ಮಾಡಿದ್ದಕ್ಕಿಂತ ಹೆಚ್ಚು ಫಲಪ್ರದ. ಇಂಥ ಭಾವ ಮಠದ ಭಕ್ತರಲ್ಲಿ ಬರುವಂತೆ ಗಮನ ಹರಿಸಬೇಕು.

ಇವತ್ತು ಚಾತುರ್ವರ್ಣ ಮತ್ತು ಸನಾತನ ಧರ್ಮದ ಬಗ್ಗೆ ಮಾತನಾಡಿದರೆ ಸಾಕು; ಅಂಥವರ ಮೇಲೆ ಮುಗಿಬೀಳುವ ವರ್ಗವೇ ಇದೆ. ಹಾಗಂತ ಬಸವ ತತ್ವ ಬಿಟ್ಟು 'ಹೊತ್ತು ಬಂದಂತೆ ಕೊಡೆ ಹಿಡಿಯುವ' ಕಾರ್ಯವನ್ನು ಸ್ವಾಮಿಗಳಾಗಲಿ ಅವರ ಭಕ್ತರಾಗಲಿ ಮಾಡಬಾರದು. ಅವರಲ್ಲಿ ಬಸವನಿಷ್ಠೆ ಗಟ್ಟಿಗೊಂಡರೆ ತಮ್ಮ ಧರ್ಮದ ತತ್ವಾದರ್ಶಗಳಂತೆ ನಡೆಯಲು ಸಾಧ್ಯ. ಸ್ವಾಮಿಗಳಿಗೆ ಪುರಾಣ ಪ್ರಜ್ಞೆಗಿಂತ ಐತಿಹಾಸಿಕ ಮತ್ತು ವರ್ತಮಾನ ಪ್ರಜ್ಞೆ ಇರಬೇಕು. ಸ್ವಾಮಿಗಳಾದವರು ಏನನ್ನೂ ಬೇಡಬಾರದು ಮತ್ತು ಭಕ್ತರಾದವರು ಬೇಡಿಸಿಕೊಳ್ಳಬಾರದು ಎನ್ನುವ ಅಭಿಪ್ರಾಯ ಶಿವಯೋಗಿ ಸಿದ್ಧರಾಮೇಶ್ವರರದು. ಅದರರ್ಥ ಸ್ವಾಮಿಗಳಾದವರು ಬರೀ ಬೇಡುವುದನ್ನೇ ಕಾಯಕ ಮಾಡಿಕೊಳ್ಳದೆ ಕಾಯಕದ ಮೂಲಕವೇ ತಮ್ಮ ಮಠವನ್ನು ಮುನ್ನಡೆಸಬೇಕು ಮತ್ತು ಭಕ್ತರಿಗೂ ಕಾಯಕದ ಮಹತ್ವ ತಿಳಿಸಿ ಅವರೂ ದುಡಿಯುವಂತೆ ಪ್ರೇರೇಪಿಸಬೇಕು. ಹಾಗೆ ದುಡಿದವರು ಮಠದ ಸತ್ಕಾರ್ಯಗಳಿಗೆ ದಾಸೋಹ ರೂಪದಲ್ಲಿ ಕೊಡುವ ಸಂಸ್ಕೃತಿಯನ್ನೂ ಬೆಳೆಸಬೇಕು. ಇಂಥ ಸಂಸ್ಕೃತಿಯನ್ನು ಭಕ್ತರಲ್ಲಿ ಬೆಳೆಸಿದವರು ನಮ್ಮ ಗುರುಗಳಾದ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರು. ಅವರ ಕಾಲದಲ್ಲಿ ಸಿರಿಗೆರೆ ಮಠವನ್ನು 'ದುಗ್ಗಾಣಿ' ಮಠ ಎಂದು ಹೀಗಳೆಯುತ್ತಿದ್ದರು. ಶಿಷ್ಯರ ಸ್ಥಿತಿಯೂ ಹಾಗೇ ಇತ್ತು.

1977 ರಲ್ಲಿ ನಮ್ಮ ಪಟ್ಟಾಭಿಷೇಕವಾಯ್ತು. ಆಗ ಸಿರಿಗೆರೆ ಮಠ ಕೋಟ್ಯಾಧಿಪತಿಗಳ ಮಠ ಎನ್ನುತ್ತಿದ್ದರು. ನಿಜಕ್ಕೂ ನಮ್ಮ ಮಠ ಕೋಟ್ಯಾಧಿಪತಿಗಳ ಮಠವೇ ಎಂದು ನಮ್ಮ ಗುರುಗಳನ್ನು ಕೇಳಿದಾಗ ಹೌದು ಎಂದರು. ಹೇಗೆ ಎಂದಾಗ ನಮ್ಮ ಮಠಕ್ಕೆ ಸಿರಿಗೆರೆಯಿಂದ ದೇಶ ವಿದೇಶದುದ್ದಗಲಕ್ಕೆ, ಬ್ರಾಹ್ಮಣರಿಂದ ಹರಿಜನರವರೆಗೆ ಶಿಷ್ಯರಿದ್ದಾರೆ. ಅವರ ಸಂಖ್ಯೆ ಕೋಟಿ ಕೋಟಿ. ಹೀಗಿರುವಾಗ ನಾವು ಕೋಟ್ಯಾಧಿಪತಿಗಳಲ್ಲವೇ ಎಂದು ನಮಗೇ ಪ್ರಶ್ನೆ ಹಾಕಿದರು. ಇದರರ್ಥ ಮಠ ಹಣದಿಂದ ಶ್ರೀಮಂತವಾಗುವುದಲ್ಲ; ಭಕ್ತರ ಸಂಖ್ಯೆಯಿಂದ ಶ್ರೀಮಂತವಾಗಬೇಕು. ನಮ್ಮ ಗುರುಗಳು ಭಕ್ತರನ್ನು ಜಾಗೃತಗೊಳಿಸಿ ಅವರಲ್ಲಿ ಕಾಯಕ ಪ್ರಜ್ಞೆ ಬೆಳೆಸಿದರು. ಅದರಿಂದ ಸಿರಿಗೆರೆ ಮಠ ಬಹು ಎತ್ತರಕ್ಕೆ ಬೆಳೆಯಲು ಕಾರಣವಾಗಿದೆ. ಸ್ವಾಮಿಗಳ ಆದರ್ಶ ವ್ಯಕ್ತಿತ್ವ, ಭಕ್ತರ ನೈತಿಕ ನೆಲೆಗಟ್ಟು ಮತ್ತು ಅವರ ಸಂಖ್ಯೆಯಿಂದ ಮಠ ಶ್ರೀಮಂತ ಮಠವಾಗಬೇಕು. ಅದು ಕೇವಲ ಭಕ್ತರ ಕಾಣಿಕೆ ಅಥವಾ ಇನ್ನಿತರ ದುಡಿಮೆಯಿಂದ ಶ್ರೀಮಂತವಾಗಬಾರದು. ಹಾಗಂತ ಭಕ್ತರು ಕಾಣಿಕೆ ಕೊಡಬಾರದು ಎಂದಲ್ಲ. ಆದರೆ ಈಗ ಹಣದಿಂದ ಮಠವನ್ನು ಮತ್ತು ಸ್ವಾಮಿಗಳನ್ನು ಅಳೆಯುವ ಕೆಟ್ಟ ಪದ್ಧತಿ ಇದೆ. ಇದು ಬಸವತತ್ವಕ್ಕೆ ಸಲ್ಲದ ನಡಾವಳಿಕೆ. ಮಠದ ಘನತೆ ಇರುವುದು ಮಠಾಧಿಪತಿಗಳ ಆದರ್ಶ ವ್ಯಕ್ತಿತ್ವ, ಜನಪರ ಕಾಳಜಿ, ಧಾರ್ಮಿಕ ನೆಲೆಗಟ್ಟಿನ ಮೇಲೆ. ಒಂದು ಮಠದ ಪೀಠದಿಂದ ಸ್ವಾಮಿಗಳು ದೊಡ್ಡವರಾಗದೆ ಅವರ ಸನ್ನಡತೆ, ಸಾಮಾಜಿಕ ಕಲ್ಯಾಣ ಕಾರ್ಯಗಳ ಮೂಲಕ ಪೀಠಕ್ಕೆ ಗೌರವ ತರಬೇಕು. ಅವರು ನದಿಯಂತೆ ಹರಿಯುವ, ಮರದಂತೆ ಬೆಳೆದು ಹೂ-ಹಣ್ಣು ಕೊಡುವ ಕಾಯಕ ನಿರ್ವಹಿಸಬೇಕು. ಮಹಾದೇವಿಯಕ್ಕನವರು ಹೇಳುವಂತೆ 'ನಿಮ್ಮ ತಲೆಗೆ ಹೂವ ತಹೆನಲ್ಲದೆ ಹುಲ್ಲ ತಾರೆನು' ಎನ್ನುವ ಭಾವವನ್ನು ಬಲಗೊಳಿಸಿಕೊಂಡಾಗಲೇ ಸ್ವಾಮಿತ್ವದ ಘನತೆ, ಮಠದ ಗೌರವ, ಭಕ್ತರ ಭಕ್ತಿ ಹೆಚ್ಚಲು ಸಾಧ್ಯ.

ಪ್ರತಿಕ್ರಿಯೆಗೆ: swamiji.ps@gmail.com
malleshbnudaya@gmail.com

## "ಯೋಗ ಮತ್ತು ಆರೋಗ್ಯ"

- ಶ್ರೀಮತಿ ಲಾವಣ್ಯ ಎಸ್. ಪಿ.

### ಉತ್ಥಿತ ಹಸ್ತ ಪಾದಾಂಗುಷ್ಠಾಸನ: (ಹೆಬ್ಬೆರಳವರೆಗೆ ಕೈ ಚಾಚಿರುವ ಭಂಗಿ)



"ದೇಹದ ಸಮತೋಲನವನ್ನು ಹೆಚ್ಚಿಸಲು ಮುಖ್ಯವಾದ ಆಸನವಾಗಿದೆ"

ಅರ್ಥ: ಸಂಸ್ಕೃತದಲ್ಲಿ ಉತ್ಥಿತ ಅಂದರೆ "ವಿಸ್ತರಿಸಿದ" ಹಸ್ತ-ಕೈ, ಪಾದ-ಕಾಲು, ಅಂಗುಷ್ಠ-ಏಕಾಗ್ರತೆ. ನಿಂತಿರುವ ಸ್ಥಿತಿಯಲ್ಲಿ ಒಂದು ಕಾಲನ್ನು ಕೈಯಿಂದ ಹಿಡಿದು ನೇರವಾಗಿ ಚಾಚುವ ಯೋಗಾಸನವಾಗಿದೆ.

ಮಾಡುವ ವಿಧಾನ: * ಮೊದಲು ಸಮ ಸ್ಥಿತಿಯಲ್ಲಿ ನೇರವಾಗಿ ನಿಂತುಕೊಳ್ಳಬೇಕು. * ಉಸಿರನ್ನು ಹೊರ ಹಾಕುತ್ತಾ, ಎಡ ಮಂಡಿಯನ್ನು ಬಗ್ಗಿಸಿ ಎಡಗೈ ತೋರು ಬೆರಳು ಮತ್ತು ಮಧ್ಯದ ಬೆರಳಿನಿಂದ ಎಡಗಾಲಿನ ಹೆಬ್ಬೆರಳನ್ನು ಹಿಡಿದುಕೊಳ್ಳಬೇಕು. * ಉಸಿರನ್ನು ತೆಗೆದುಕೊಳ್ಳುತ್ತಾ, ಎಡಗಾಲನ್ನು ಮುಂದಕ್ಕೆ ನೇರವಾಗಿ ಚಾಚಿ. * ಬೆನ್ನು, ಕತ್ತನ್ನು ನೇರವಾಗಿರಿಸಿ, ಬಲಗಾಲು (standing leg) ಸ್ಥಿರವಾಗಿರಲಿ. * ಉಸಿರನ್ನು ಬಿಡುತ್ತಾ, ನೇರವಾದ ಕಾಲನ್ನು (ಎಡಗಾಲನ್ನು) ಪಕ್ಕಕ್ಕೆ ತಿರುಗಿಸಿ, ಬಲಗೈಯನ್ನು ಸೊಂಟದ ಮೇಲೆ ಇರಿಸಿ,ದೃಷ್ಟಿ ಮುಂದಕ್ಕೆ ನೋಡುತ್ತಿರಲಿ. * ಈ ಸ್ಥಿತಿಯಲ್ಲಿ ಸುಮಾರು 5-10 ಉಸಿರಾಟಗಳ ಕಾಲ ಇರಬಹುದು.

ಮುಕ್ತಾಯ: ನಿಧಾನವಾಗಿ ಕಾಲನ್ನು ಮಧ್ಯಕ್ಕೆ ತಂದು, ಕೆಳಗಿಳಿಸಿ ಇದೇ ಪ್ರಕ್ರಿಯೆಯನ್ನು ಇನ್ನೊಂದು ಕಾಲಿನಿಂದಲೂ ಪುನರಾವರ್ತಿಸಿ.

ಉಪಯೋಗಗಳು: * ಇದು ಪಾದ, ಕಾಲುಗಳು, ಮತ್ತು ತೋಳುಗಳನ್ನು ಬಲಪಡಿಸುತ್ತದೆ. * ಸೊಂಟದ ಭಾಗದ ನಮ್ಯತೆಯನ್ನು ಹೆಚ್ಚಿಸುತ್ತದೆ ಮತ್ತು ಮಂಡಿರಜ್ಜುಗಳನ್ನು (hamstrings) ಹಿಗ್ಗಿಸುತ್ತದೆ. * ರಕ್ತ ಪರಿಚಲನೆಯನ್ನು ಸುಧಾರಿಸುತ್ತದೆ ಮತ್ತು ಬೆನ್ನು ಮೂಳೆಯನ್ನು ನೇರಗೊಳಿಸಲು ಸಹಾಯ ಮಾಡುತ್ತದೆ. * ಹೃದಯದ ಆರೋಗ್ಯವನ್ನು ಕಾಪಾಡುತ್ತದೆ. * ಸಯಾಟಿಕ್ ನೋವು, ವೆರಿಕೋಸು ವೇನ್ಸ್ (ಉಬ್ಬಿರುವ ರಕ್ತನಾಳಗಳು) ಮತ್ತು ಹರ್ನಿಯಾ ತೊಂದರೆಗಳನ್ನು ಕಡಿಮೆ ಮಾಡುತ್ತದೆ.

ಗಮನಿಸಿ: ಕಡಿಮೆ ರಕ್ತದೊತ್ತಡ, ಮೊಣಕಾಲು, ಪಾದದ ಅಥವಾ ಸೊಂಟದ ನೋವಿದ್ದರೆ ಇದನ್ನು ಮಾಡಬಾರದು. ಪ್ರಾರಂಭದಲ್ಲಿ ಗೋಡೆಯ ಸಹಾಯದಿಂದ ಮಾಡುವುದು ಉತ್ತಮ.

ಯೋಗಾಸನಗಳನ್ನು ಯೋಗ ಶಿಕ್ಷಕರ ಮಾರ್ಗದರ್ಶನದಲ್ಲಿ ಮಾಡಬೇಕು. ಪತ್ರಿಕೆ ಓದಿ ಸ್ವಯಂ ಅಭ್ಯಾಸ ಒಳ್ಳೆಯದಲ್ಲ

## ಶಾಲೆ ಮೇಲೆ ಗುಂಡಿನ ಮಳೆ, 22 ಮಕ್ಕಳು ಸೇರಿ ಕನಿಷ್ಟ....

(1ನೇ ಪುಟದಿಂದ)

ನಂತರ ಈ ಘಟನೆ ನಡೆದಿದೆ. ಬುಧವಾರ ಮಧ್ಯಾಹ್ನ ದಕ್ಷಿಣ ಥೈಲ್ಯಾಂಡ್‌ನ ಶಾಲೆಯಲ್ಲಿ 18 ವರ್ಷದ ಬಂದೂಕುಧಾರಿಯೊಬ್ಬ ಕ್ಯಾಂಪಸ್‌ಗೆ ನುಗ್ಗಿ ಮೆಷಿನ್ ಗನ್‌ನಿಂದ ಮನಸೋ ಇಚ್ಛೆ ದಾಳಿ ಮಾಡಿದ್ದಾನೆ.

ಆರಂಭದಲ್ಲಿ ಶಾಲೆಯ ಪ್ರಾಂಶುಪಾಲರನ್ನು ಗಾಯಗೊಳಿಸಿ, ಇತರರನ್ನು ಒತ್ತೆಯಾಳಾಗಿ ತೆಗೆದು ಕೊಳ್ಳಲು ಯತ್ನಿಸಿದ್ದಾನೆ. ಗುಂಡಿನ ಶಬ್ದ ಕೇಳುತ್ತಲೇ ಶಾಲೆಯಲ್ಲಿದ್ದ ಮಕ್ಕಳು ಮತ್ತು ಶಿಕ್ಷಕರು ದಿಕ್ಕಾಪಾಲಾಗಿ ಓಡಲು ಆರಂಭಿಸಿದ್ದಾರೆ. ಬಳಿಕ ಬಂದೂಕು ದಾರಿ ಸಿಕ್ಕ ಸಿಕ್ಕ ಕಡೆ ಗುಂಡಿನ ದಾಳಿ ನಡೆಸಿದ್ದಾನೆ. ಈ ವೇಳೆ 22 ಮಕ್ಕಳು 12 ಮಂದಿ ಇತರರು ಸೇರಿ 34 ಮಂದಿ ಸಾವನ್ನಪ್ಪಿದ್ದಾರೆ ಎಂದು ಹೇಳಲಾಗಿದೆ.

ದಾಳಿಕೋರ ಮೆಷಿನ್ ಗನ್ ಹಿಡಿದುಕೊಂಡು ಮೈದಾನದಲ್ಲಿ ನಡೆದುಕೊಂಡು ಹೋಗುತ್ತಲೇ ಗುಂಡು ಹಾರಿಸುತ್ತಿದ್ದ ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ.

ವಿಚಾರ ತಿಳಿಯುತ್ತಲೇ ಹ್ಯಾಟ್ ಯೈ ಮತ್ತು ಥಂಗ್ ಲುಂಗ್ ಜಿಲ್ಲೆಗಳ ವಿಶೇಷ ಕಾರ್ಯಾಚರಣೆ ಪಡೆಗಳು ಮತ್ತು ಸ್ಥಳೀಯ ಪೊಲೀಸರು ಈ ಪ್ರದೇಶವನ್ನು ಸುತ್ತುವರೆದಿದ್ದಾರೆ. ಅಂತೆಯೇ ಬಂದೂಕುದಾರಿ ಭದ್ರತಾ ಪಡೆಗಳೊಂದಿಗೆ ಗುಂಡಿನ ಚಕಮಕಿಯಲ್ಲಿ ನಿರತನಾಗಿದ್ದರೆ ಇತ್ತ ಶಾಲೆಯಲ್ಲಿದ್ದ ಮಕ್ಕಳು ಮತ್ತು ಸಿಬ್ಬಂದಿ ಕ್ಯಾಂಪಸ್‌ನಿಂದ ಹತ್ತಿರದ ರಸ್ತೆಗಳಿಗೆ ಪಲಾಯನ ಮಾಡುತ್ತಿರುವುದು ಕಂಡುಬಂದಿದೆ.

## ನಗರದಲ್ಲಿಂದು ಉಪನ್ಯಾಸ

ದಾವಣಗೆರೆ.ಫೆ.11: ವಿವೇಕ್ ಪೋಷಕರ ಆರೋಗ್ಯ ಕಾರ್ಯಾಗಾರದ ಅಡಿಯಲ್ಲಿ ಫೆ.12ರ ಇಂದು ಮಧ್ಯಾಹ್ನ 3.30ಕ್ಕೆ ನಗರದ ಬಾಪೂಜಿ ಮಕ್ಕಳ ಸಂಸ್ಥೆ ಮತ್ತು ಸಂಶೋಧನ ಕೇಂದ್ರದ ಸಭಾಂಗಣದಲ್ಲಿ ""ಅಪಘಾತದಲ್ಲಿ ತಲೆಗೆ ಪೆಟ್ಟು ಬಿದ್ದಾಗ ನೀಡಬೇಕಾದ ಪ್ರಥಮ ಚಿಕಿತ್ಸೆ, ತದನಂತರ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ" ಎಂಬ ವಿಷಯದ ಕುರಿತು ಜ.ಜ.ಮು. ವೈದ್ಯಕೀಯ ಕಾಲೇಜಿನ ನರರೋಗ ತಜ್ಞ ಡಾ.ಸಚಿನ್ ಉಪನ್ಯಾಸ ನೀಡಲಿದ್ದು, ಪೋಷಕರು, ವೈದ್ಯರು, ನರ್ಸಿಂಗ್ ವಿದ್ಯಾರ್ಥಿಗಳು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಕೇಂದ್ರದ ನಿರ್ದೇಶಕ ಜಿ.ಗುರುಪ್ರಸಾದ್ ವಿನಂತಿಸಿದ್ದಾರೆ.

## ಉತ್ತಮ ಆರೋಗ್ಯ ಪ್ರತಿಯೊಬ್ಬರ ಮೊದಲ ಆದ್ಯತೆ ವೈದ್ಯಾಧಿಕಾರಿ ಡಾ|| ಅಭಿನಂದನ ಸಾಹುಕಾರ ಸಲಹೆ



ರಾಣೇಬೆನ್ನೂರು, ಫೆ.11: ಉತ್ತಮ ಅರೋಗ್ಯವನ್ನ ಕಾಪಾಡಿಕೊಳ್ಳಲು ನಿತ್ಯ ವ್ಯಾಯಾಮ ಹಾಗೂ ಸಮತೋಲನ ಆಹಾರ ಸೇವಿಸಬೇಕು ಅಂದಾಗ ಮಾತ್ರ ಪ್ರತಿಯೊಬ್ಬರೂ ಆರೋಗ್ಯವಂತರಾಗಿರಲು ಸಾಧ್ಯ ಎಂದು ವೈದ್ಯಾಧಿಕಾರಿ ಡಾ. ಅಭಿನಂದನ ಸಾಹುಕಾರ ಹೇಳಿದರು.

ತಾಲೂಕಿನ ಕೋಡಿಯಾಲ ಗ್ರಾಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ನಡೆದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಮನೆಯಲ್ಲಿ ಜಂಕ್ ಫುಡ್‌ಗಳನ್ನು ಸೇವಿಸುವುದರಿಂದ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವುದು ಆದ್ದರಿಂದ ಜಂಕ್ ಫುಡ್‌ಗಳಿಂದ ದೂರವಿದ್ದು ಉತ್ತಮವಾದ ಆರೋಗ್ಯವನ್ನು ಕಾಪಾಡಿಕೊಳ್ಳಬೇಕೆಂದು ಸಾಹುಕಾರ ಸಲಹೆ ನೀಡಿದರು.

ಯೋಜನಾಧಿಕಾರಿ ಮಂಜುನಾಥ ಮಾತನಾಡಿ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಸರ್ವರ ಒಳಿತಿಗಾಗಿ ಹಲವಾರು ಯೋಜನೆಗಳನ್ನು ಜಾರಿಗೊಳಿಸಿದೆ ಅವುಗಳ ಸದುಪಯೋಗ ಪಡೆದು-ಕೊಂಡು ಆರ್ಥಿಕ ಸ್ವಾವಲಂಬಿಗಳಾಗುವುದರ ಜೊತೆಗೆ ಉತ್ತಮವಾದ ಆರೋಗ್ಯವನ್ನು ಕಾಪಾಡಿಕೊಳ್ಳಬೇಕೆಂದರು. ಜ್ಞಾನ ವಿಕಾಸ ಕಾರ್ಯಕ್ರಮಗಳಡಿ ಅನೇಕ ಕಾರ್ಯಕ್ರಮಗಳು ನಡೆಯುತ್ತವೆ ಎಲ್ಲರೂ ಪಾಲ್ಗೊಂಡು ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳಬೇಕೆಂದು ಯೋಜನೆಯ ಬಗ್ಗೆ ಸಮಗ್ರವಾದ ಮಾಹಿತಿಯನ್ನು ನೀಡಿದರು.

ಎಲುಬು ಮತ್ತು ಕೀಲು ತಜ್ಞರಾದ ಮಲ್ಲಪ್ಪ ಮಾತನಾಡಿ, ಸಾಯಿ ಆಸ್ಪತ್ರೆ ನೆಟ್ವರ್ಕ್ ಆಸ್ಪತ್ರೆಯಾಗಿದ್ದು ನಗದು ರಹಿತ ಚಿಕಿತ್ಸೆ ಪಡೆದುಕೊಳ್ಳುವ ಬಗ್ಗೆ ಹಾಗೂ ಸಾಯಿ ಆಸ್ಪತ್ರೆಯಲ್ಲಿರುವ ಸೌಲಭ್ಯಗಳ ಕುರಿತು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ 100 ಕ್ಕಿಂತ ಅಧಿಕ ಜನರ ಕಣ್ಣು, ಬೆನ್ನು ನೋವು, ಗಂಟಲು ನೋವು, ಕೈ ಕಾಲು ನೋವು, ಬಿ.ಪಿ, ಶುಗರ್ ತಪಾಸಣೆ ಮಾಡಲಾಯಿತು.

ಬಸವರಾಜ ಬಿರ್ಲಾ ಕಂಪನಿ ಯೂನಿಯನ್ ಲೀಡರ್ ಬಸವರಾಜ, ಕೇಂದ್ರದ ಅಧ್ಯಕ್ಷೆ ಪ್ರೇಮಾ, ಸಮನ್ವಯಧಿಕಾರಿ ಕೃಷ್ಣ ಮೂರ್ತಿ, ಜ್ಞಾನ ವಿಕಾಸ ಸಮನ್ವಯಧಿಕಾರಿ ವೆಂಕಟಮಾಲಾ, ಸ್ಥಳೀಯ ಸೇವಾಪ್ರತಿನಿಧಿಗಳಾದ ಆಶಾ ಮತ್ತು ರೂಪಾ ಸಂಘದ ಸದಸ್ಯರು ಮತ್ತಿತರರು ಉಪಸ್ಥಿತರಿದ್ದರು.

**ಕರ್ನಾಟಕ ನೀರಾವರಿ ನಿಗಮ ನಿಯಮಿತ**
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ನಂ. 3 ಭದ್ರಾ ನಾಲಾ ವಿಭಾಗ, ಮಲೇಬೆನ್ನೂರು. ಫೋನ್/ಫ್ಯಾಕ್ಸ್:08192-200255
Email:eeknnlmbr@gmail.com

ನಂ:ಕಾಇಂ/ಕನೀನಿನಿ/ಭನಾವಿ3/ಮಬೆ/ಪಿ.ಬಿ/ಟೆಂಡರ್‌ಪ್ರಕಟಣೆ/1589/2025-26 ದಿನಾಂಕ:09.02.2026

**ಟೆಂಡರ್ ಪ್ರಕಟಣೆ**

ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಕ.ನೀ.ನಿ.ನಿ, ನಂ.3 ಭದ್ರಾ ನಾಲಾ ವಿಭಾಗ, ಮಲೇಬೆನ್ನೂರು ಇಂದ ಉಲ್ಲೇಖಿತ ಟೆಂಡರ್ ಪ್ರಕಟಣೆಯಲ್ಲಿ ಲೆಕ್ಕ ಶೀರ್ಷಿಕೆ 2700 R & M ಅಡಿಗಳಲ್ಲಿನ ಕಾಮಗಾರಿಗೆ ಏಕ ಲಕೋಟೆ ಪದ್ಧತಿಯಡಿ ಕೆಪಿಪಿಪಿ-ಪೋರ್ಟ್‌ಲ್ ಮುಖಾಂತರ ಟೆಂಡರ್‌ನ್ನು ಅಹ್ವಾನಿಸಲಾಗಿದ್ದು. ಅರ್ಹ ಗುತ್ತಿಗೆದಾರರಿಂದ ಶೇಕಡಾವಾರು ಟೆಂಡರ್‌ನ್ನು ಕೆಪಿಪಿಪಿ-ಪೋರ್ಟ್‌ಲ್ ವೆಬ್‌ಸೈಟ್ (https://kppp.karnataka.gov.in) ಮುಖಾಂತರವೇ ದಿ:11.02.2026 ರಿಂದ ಡೌನಲೋಡ್ ಮಾಡಿಕೊಂಡು ದಿ:19.02.2026ರ ಸಂಜೆ 4.30ಘಂಟೆವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಟೆಂಡರ್ ಕುರಿತು ಸ್ಪಷ್ಟೀಕರಣಕ್ಕೆ ದಿನಾಂಕ: 17.02.2026 ರಂದು 12.00 ಘಂಟೆವರೆಗೆ ವಿಭಾಗ ಕಛೇರಿಗೆ ಸಂಪರ್ಕಿಸಬಹುದಾಗಿರುತ್ತದೆ ಮತ್ತು ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 20.02.2026 ರಂದು ಸಂಜೆ 04.35 ಘಂಟೆ.

**ಒಟ್ಟು ಕಾಮಗಾರಿ ಸಂಖ್ಯೆ :- 2 ಸಂಖ್ಯೆ.**

**(1)** KNNL/2025-26/BD/WORK_INDENT4022
(RESERVED FOR SC)
ರೂ. 6.42 ಲಕ್ಷಗಳು (ಜಿ.ಎಸ್.ಟಿ. ಒಳಗೊಂಡಂತೆ)

**(2)** KNNL/2025-26/DA/WORK_INDENT4076
(RESERVED FOR CAT-I)
ರೂ. 4.99 ಲಕ್ಷಗಳು (ಜಿ.ಎಸ್.ಟಿ. ಒಳಗೊಂಡಂತೆ)

ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಮುಂದೂಡುವ, ಅಂಗಿಕರೀಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ. ಹೆಚ್ಚಿನ ಮಾಹಿತಿಗಾಗಿ ಕೆಪಿಪಿಪಿ-ಪೋರ್ಟ್‌ಲ್ ಅಥವಾ ಕಛೇರಿ ವೇಳೆಯಲ್ಲಿ ಕೆಳಗೆ ಸಹಿ ಮಾಡಿದವರ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ.

ವಾಸಾಇ/ಡಿವಿಜಿ/733/ಕೆಎಸ್‌ಎಂಸಿಎ/2025-26

**ಸಹಿ/- ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ನಂ.3, ಭದ್ರಾ ನಾಲಾ ವಿಭಾಗ, ಮಲೇಬೆನ್ನೂರು.**

## DAVANGERE SUGAR COMPANY LIMITED

L10721KA1970PLC001949 - 73/1, Post Box No.312, Shamanur Road, Davangere 577004.
Email: davangeresugars@gmail.com - accounts@davangeresugars.com - website: www.davangeresugar.com

**Extract of Standalone Un-Audited Financial Results for the Quarter / Nine Months ended December 31, 2025**

(Rs. in Lakhs except EPS)

| Sr. No | Particulars | Quarter Ended | | | Nine-Months ended | | Year Ended (Audited) |
|---|---|---|---|---|---|---|---|
| | | 31.12.2025 | 30.09.2025 | 31.12.2024 | 31.12.2025 | 31.12.2024 | 31-03-2025 |
| 1 | Revenue from Operations<br>Other income | 8,268.61<br>62.10 | 4,819.26<br>57.72 | 7,317.75<br>40.62 | 15,494.88<br>166.10 | 15,807.84<br>120.25 | 21,498.53<br>177.07 |
| | **Total Income** | **8,330.71** | **4,876.98** | **7,358.37** | **15,660.98** | **15,928.09** | **21,675.60** |
| 2 | Net Profit/(Loss) for the period (before Tax, Exceptional and/or Extraordinary items) | 452.47 | 333.16 | 746.04 | 958.12 | 1,061.18 | 1,285.90 |
| 3 | Net Profit / (Loss) for the period before tax (after Exceptional and/or Extraordinary items) | 452.47 | 333.16 | 746.04 | 958.12 | 1,061.18 | 1,285.90 |
| 4 | Net Profit / (Loss) for the period after tax (after Exceptional and/or Extraordinary items) | 262.27 | 262.99 | 676.89 | 655.67 | 899.45 | 1,093.71 |
| 5 | Total Comprehensive Income for the period [Comprising Profit / (Loss) for the period (after tax) and Other Comprehensive Income (after tax)] | 134.24 | 262.99 | 676.89 | 527.64 | 899.45 | 1,083.11 |
| 6 | **Equity Share Capital** | **14,299.91** | **14,299.91** | **9,408.44** | **14,299.91** | **9,408.44** | **9,408.44** |
| 7 | Earnings Per Share (for continuing and discontinued operations)<br>1. Basic:<br>2. Diluted: | <br><br>0.01<br>0.01 | <br><br>0.02<br>0.02 | <br><br>0.07<br>0.07 | <br><br>0.04<br>0.04 | <br><br>0.10<br>0.10 | <br><br>0.12<br>0.12 |

**NOTE:** a) The above results have been reviewed by the Audit Committee and approved by Board of Directors at its meeting held on February 10, 2026. b) The above is an extract of the detailed format of Quarterly / Nine months Financial Results filed with the Stock Exchanges under Regulation 33 of the SEBI (Listing and Other Disclosure Requirements) Regulations, 2015. The full formats of the Quarterly / Nine months Financial Results are available on the websites of stock exchange i.e., www.bseindia.com, www.nseindia.com and on the website of the Company i.e., www.davangeresugar.com and can be accessed through the given QR code.

**Place: Davangere**
**Date : 10th February,2026**

**For DAVANGERE SUGAR COMPANY LIMITED**
**Sd/- Ganesh S Shamanur**
**Managing Director**
**DIN: 00451383**

**ವಸಂತ** 4K
DOLBY ATMOS
ದಿನ 4 ಆಟಗಳು
06.02.2026ರಿಂದ ಪ್ರಾರಂಭ
Tickets are available in bookmyshow
**ಕನ್ನಡ ಚಿತ್ರ**
ಸಮಯ: ಬೆಳಿಗ್ಗೆ 11ಕ್ಕೆ, ಮಧ್ಯಾಹ್ನ:2ಕ್ಕೆ ಸಂಜೆ: 6ಕ್ಕೆ, ರಾತ್ರಿ: 9ಕ್ಕೆ




**ಅಶೋಕ**
DOLBY DIGITAL dts
ದಿನ 4 ಆಟಗಳು
06.02.2026ರಿಂದ ಪ್ರಾರಂಭ
ticket avabale bookmyshow
**ಕನ್ನಡ ಚಿತ್ರ**
ಸಮಯ: ಬೆಳಿಗ್ಗೆ 11ಕ್ಕೆ, ಮಧ್ಯಾಹ್ನ:2ಕ್ಕೆ ಸಂಜೆ: 6ಕ್ಕೆ, ರಾತ್ರಿ: 9ಕ್ಕೆ




ಗೋಲ್ಡನ್ ಕ್ಲಾಸ್: 250 ರೂ, ಬಾಲ್ಕನಿ: 200 ರೂ, ಫಸ್ಟ್ ಕ್ಲಾಸ್: 150 ರೂ

**ಗೀತಾಂಜಲಿ**
DOLBY DIGITAL dts
ದಿನ 4 ಆಟಗಳು
ಜನಭರಿತ 3ನೇ ವಾರ
**ಕನ್ನಡ ಚಿತ್ರ**
ಬೆ: 11-ಕ್ಕೆ, ಮ: 2-ಕ್ಕೆ ಸಂ: 6-ಕ್ಕೆ: ರಾ-9-ಕ್ಕೆ




ದುನಿಯಾ ವಿಜಯ್, ರಚಿತಾ ರಾಮ್ ಅಭಿನಯದ: **ಲ್ಯಾಂಡ್ ಲಾರ್ಡ್**